ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ನನ್ನ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಬೇಕು. ೧೯೮೬-೮೭ರಲ್ಲಿ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸುವುದಕ್ಕೆ ಅಥವಾ ಸಂಖ್ಯೆಯನ್ನು ಹೆಚ್ಚು ಮಾಡುವುದಕ್ಕೆ ಬಡ್ಜೆಟಿನಲ್ಲಿ ಪ್ರಾವಿಜನ್ ಮಾಡಿಕೊಳ್ಳಬೇಕಾಗಿತ್ತು. ಪ್ರಾವಿಜನ್ ಮಾಡಿಕೊಳ್ಳಲಿಕ್ಕೆ ಆಗಿಲ್ಲ. ಮಾನ್ಯ ಸದಸ್ಯರ ಕಳಕಳಿ ಏನಿದೆ ಅದನ್ನು ಖಂಡಿತವಾಗಿಯೂ ಈಡೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಜಯಕುಮಾರ್‌ರವರು, ಬಂದಿಲ್ಲ. ಮಾನ್ಯ ಸದಸ್ಯರಾದ ಎಸ್. ಜಿ. ನಂಜಯ್ಯನಮಠ್‌ರವರೇ ತಮ್ಮ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

Speeial measures to develop Gulberga under state Comprehensive Development Plan

656. SRI VISHWANATH PATIL HEBBAL.—Will the Minister for Revenue, Planning and Labour be pleased to state.

a) Whether it has come to the notice of the Government that Gulbarga District stands at 10th Rank in the State in Comprehensive Development since from 1956 to up-date ?

b) The special measures that would be taken by Government for the development of Gulbarga District, a most backward District ?

c) Whether action would be taken to constitute a Hyderabad-Karnataka Development Board with full power in the State on par with Maratawada Development Board in Maharashtra and Telangana Development Board in Andhra Pradesh ?

d) If so, the date on which it would be constituted ?

SRI S.R. BOMMAI (The Minister for Revenue Planning and Labour.—

a) Government is aware that the Gulbarga District is one of the Backward Districts in the State.

b) For fastar development of Gulbarga District, high priority is given for Major. Medium and Minor Irrigation Projects and Command Area Development and higher allocation are made from year to year. Poverty alleviation programme like IRDP, NREP, RLEGP are being implemented. Dryland Development Board has been established to tackle the problems of dryland areas. DPAP is is also under implementation in this district. In addition to this higher outlays are allocated under District Sector Plan to this District on the basis of objective criteria.

c) Zilla Parishad and Mandal Panchayats have been established Adequate freedom will be given to these local institutions to formulate their plans based on local problems, In view of this there is no need to establish Hyderbad Karnataka Development Board.

d) Does not arise in view of answer to question (c).

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಸದನಕ್ಕೆ ಮೊದಲೇ ಹೇಳಿದಂತೆ ಹೈದರಾಬಾದ್ ಕರ್ನಾಟಕ ರಾಜ್ಯದಲ್ಲಿ ಅತಿ ಹಿಂದುಳಿದ ಭಾಗ ಎಂಬುದನ್ನು ಮನಗಂಡು ನಾವು ಕೇಂದ್ರಸರ್ಕಾರವನ್ನು ತೆಲಂಗಾಣದಲ್ಲಿ ಯಾವರೀತಿ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗಿದೆ, ಪಶ್ಚಿಮಬಂಗಾಳದ ಸಂದರ್‌ಬಾನ್ ಏರಿಯಾದಲ್ಲಿ ಯಾವರೀತಿ ವಿಶೇಷವಾದ ಹಣದ ಸೌಲಭ್ಯವನ್ನು ಒದಗಿಸಲಾಗಿದೆ. ಅದೇ ರೀತಿ ನಮ್ಮಲ್ಲಿಯೂ ಕೂಡ ಮಾಡಬೇಕೆಂದು ಕೇಳಿಕೊಳ್ಳಲಾಯಿತು. ರಾಜ್ಯಸರ್ಕಾರ ಹಣ ಕೊಡಲಿಕ್ಕೆ ಸಿದ್ಧವಿದೆಯೆಂದು ಬರೆದಿದ್ದೇವೆ. ಯೋಜನಾ ಆಯೋಗದವರು ಸಾಕಷ್ಟು ಹಣ ಇಲ್ಲದೇ ಇರುವುದರಿಂದ ಇದನ್ನು ಪರಿಶೀಲನೆ ಮಾಡಲಿಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ನಾನು ನಿಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಹೈದರಾಬಾದ್ ಏರಿಯಾದ ಶಾಸಕರು ಲೋಕಸಭಾ ಸದಸ್ಯರು ಅವಶ್ಯಬಿದ್ದರೆ ನಾವೂ ನೀವೂ ಎಲ್ಲಾ ಸೇರಿ ಯೋಜನಾ ಮಂಜೂರಾತಿಯನ್ನು ಪಡೆದುಕೊಳ್ಳಲು ದೆಹಲಿ ಸರ್ಕಾರಕ್ಕೆ ಒತ್ತಾಯ ಮಾಡಬೇಕೆಂದು ಸೂಚನೆ ಕೊಡುತ್ತೇನೆ.

ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ.—ನನ್ನ 'ಎ' ಪ್ರಶ್ನೆಗೆ ಮಂತ್ರಿಗಳು ಉತ್ತರ ಕೊಡುವಾಗ 'Government is aware that the Gulbarga District is one of the Backward Districts in the State ಎಂದು ಕೊಟ್ಟಿದ್ದಾರೆ. ೧೯೮೬-೮೭ರ ಕರ್ನಾಟಕ ಡ್ರಾಫ್ಟ್ ಅನ್ಯುಯಲ್ ಪ್ಲಾನ್ ರಿಪೋರ್ಟ್ ಪೇಜ್ ೩೧ರಲ್ಲಿ ಗ್ರಾಂತರ ಜಿಲ್ಲೆಗಳನ್ನು ನಾಲ್ಕು ಕ್ಯಾಟಗರಿಗಳನ್ನಾಗಿ ಮಾಡಿದ್ದಾರೆ. ಅದರಲ್ಲಿ ಬೆಂಗಳೂರು, ದಕ್ಷಿಣಕನ್ನಡ ಒಂದು ಕ್ಯಾಟಗರಿ, ಮಂತ್ರೊಂದು ಶಿವಮೊಗ್ಗ, ಮಂಡ್ಯ, ಬೆಳಗಾಂ, ಚಿತ್ರದುರ್ಗ, ಬ್ಯಾಕ್‌ವರ್ಡ್ ಜಿಲ್ಲೆಗಳು ಕೋಲಾರ, ತುಮಕೂರು ಹಾಸನ ಮತ್ತು ಬಿಜಾಪುರ, ಉತ್ತರಕರ್ನಾಟಕದ ಜಿಲ್ಲೆಗ್ಲಳಾದ ಬಳ್ಳಾರಿ, ರಾಯಚೂರು, ಹೈಲ್ಲಿ ಬ್ಲಾಕ್‌ವರ್ಡ್ ಜಿಲ್ಲೆ ಅಂದರೆ ಗುಲ್ಬರ್ಗ. ಬಹಳಷ್ಟು ಹಿಂದುಳಿದಿರುವ ಜಿಲ್ಲೆ ಗುಲ್ಬರ್ಗ ಒಂದೇ ಒಂದು ಇದೆ. ಮಾನ್ಯ ಯೋಜನಾ ಸಚಿವರು ೧೯೮೬-೮೭ರಲ್ಲಿ ಏನು ಆಚ್ಚು ಹಾಕಿಸಿದ್ದಾರೆ. ಆದರಲ್ಲಿ ೧೯೭೧ರಿಂದ ೧೯೮೪ರವರೆಗೆ ಕಂಟಿನ್ಯುಯಸ್ ಆಗಿ ಗುಲ್ಬರ್ಗ ೧೯ನೇ ಸ್ಥಾನದಲ್ಲಿದೆ. ಮಾನ್ಯಸಚಿವರು ಸತತವಾಗಿ ಹಿಂದುಳಿದಿರುವ ಜಿಲ್ಲೆಗಾಗಿ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು.

ಮಾನ್ಯ ಅಧ್ಯಕ್ಷರೇ, (ಬಿ) ಪ್ರಶ್ನೆಗೆ ಉತ್ತರ ಕೊಡುತ್ತಾ, ಮೈನರ್ ಇರಿಗೇಷನ್‌ಗೆ ದುಡ್ಡು ಕೊಟ್ಟಿದ್ದೇವೆ. ಎನ್‌ಆರ್‌ಇಪಿ ಯಲ್ಲಿ ದುಡ್ಡು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಆದರೆ ಕಳೆದ ನಾಲ್ಕು ವರ್ಷಗಳಿಂದ ಯಾವುದೇ ಹಣವನ್ನು ಕೊಟ್ಟಿಲ್ಲ. ಗುಲ್ಬರ್ಗಾ ಜಿಲ್ಲೆಗೆ ಒಂದು ಮೈನರ್ ಇರಿಗೇಷನ್ ಆಗಲಿ, ಮೇಜರ್ ಇರಿಗೇಷನ್ ಆಗಲಿ ಕೊಟ್ಟಿಲ್ಲ.

ಅಧ್ಯಕ್ಷರು.—ನೀವು ಪ್ರಶ್ನೆ ಕೇಳಿ. ಭಾಷಣ ಮಾಡುವುದಲ್ಲ.

ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್.— ಉಪಪ್ರಶ್ನೆಯನ್ನೇ ಕೇಳುತ್ತಿದ್ದೇನೆ ಅಧ್ಯಕ್ಷರೇ. (ಸಿ) ಪ್ರಶ್ನೆಗೆ ಉತ್ತರವಾಗಿ ಜಿಲ್ಲಾಪರಿಷತ್ತು, ಮಂಡಲ ಪಂಚಾಯತ್ ಬಗ್ಗೆ ಹೇಳಿದ್ದಾರೆ.

ಅಧ್ಯಕ್ಷರು.—ಸಾಕಂ ನಿಲ್ಲಿಸಿ. ಇಲ್ಲದಿದ್ದರೆ ರೆಕಾರ್ಡ್ ಮಾಡಬೇಡಿ ಎಂದೂ ಹೇಳಬೇಕಾಗುತ್ತದೆ.

ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ,—ವಿಶೇಷವಾಗಿ ಹೈದರಾಬಾದ್ ಕರ್ನಾಟಕ ಬೋರ್ಡ್ ಮಾಡದೇ ಇದ್ದರೆ ಗುಲ್ಬರ್ಗಾ, ಬೀದರ್, ರಾಯಚೂರು ಜಿಲ್ಲೆಗಳು ಪ್ರಗತಿಯಾಗುವುದು ಸಾಧ್ಯವಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ನಿರ್ದಿಷ್ಟವಾಗಿ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹೇಳಬೇಕು.

ಅಧ್ಯಕ್ಷರು.—ಕಡೆ ಪ್ರಶ್ನೆ ಕೇಳಿದಿರಲ್ಲಾ, ಅದು ಸರಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ವಿಶೇಷ ಗಮನ ಸರ್ಕಾರ ಕೊಟ್ಟಿಲ್ಲ ಎನ್ನುವುದರಲ್ಲಿ ಅರ್ಥ ಇಲ್ಲ. ೧೯೮೧-೮೬ರಿಂದ ೧೯೮೬-೯೦ರವರೆಗೆ ೧೮೫-೪೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ೧೯೮೪-೮೫ರಿಂದ ೧೯೮೬-೮೭ರವರೆಗೆ ೨೩೭-೮೪ ಲಕ್ಷ ರೂಪಾಯಿಗಳನ್ನು ನಾವು ಒದಗಿಸಿದ್ದೇವೆ ವಿಂಡಿಯಂ, ಮೇಜರ್ ಇರಿಗೇಷನ್ ಮತ್ತು ಬೇರೆಬೇರೆ ವಿಷಯಕ್ಕೆ ಪ್ರಸ್ತುತ ವರ್ಷ ೯೦-೭೨ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಹಿಂದಿನಕ್ಕಿಂತ ಎರಡು ಪಟ್ಟು, ಮೂರೂ ಪಟ್ಟು ಹೆಚ್ಚು ಹಣ ಕೊಟ್ಟಿದ್ದೇವೆ. ನೀರಾವರಿಗೆ ಮಧ್ಯಮ, ದೊಡ್ಡ ಮತ್ತು ಚಿಕ್ಕ ನೀರಾವರಿಗಾಗಿ ಹೆಚ್ಚು ಹಣವನ್ನು ಅಂದರೆ ೭೮ ಕೋಟಿ ಕೊಟ್ಟಿದ್ದೇವೆ. ಮತ್ತು ಎನ್‌ಆರ್‌ಇಪಿ ಗೆ ೬ ಕೋಟಿ ಕೊಟ್ಟಿದ್ದೇವೆ. ಹಿಂದಿನದಕ್ಕಿಂತ ಹೆಚ್ಚು ಹಣವನ್ನು ಒದಗಿಸಿದ್ದೇವೆ. ಎರಡು ಪಟ್ಟು ಕೆಲವಕ್ಕೆ

ಪೂರಾ ಪಟ್ಟು ಹಣ ಒದಗಿಸಿದ್ದೇವೆ. ಇದರಿಂದ ಆ ಪ್ರದೇಶದ, ಆ ಜಿಲ್ಲೆಯ ಹಿಂದುಳಿದಿರುವಿಕೆ ಹೋಗುತ್ತದೆ ಎಂದು ಅಭಿಪ್ರಾಯವಲ್ಲ. ಹೆಚ್ಚಿಗೆ ಹಣ ಕೊಡಬೇಕು. ಕೊಡುವುದಕ್ಕೆ ನಾವು ಈಗಾಗಲೇ 2ನೇ ಪಂಚವಾರ್ಷಿಕ ಯೋಜನೆಯಲ್ಲಿ ೧೩೦ ಕೋಟಿ ಮತ್ತು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ೨೭೦ ಕೋಟಿ ಕೊಡಬೇಕೆಂದು ಹೇಳಿದ್ದೇವೆ. ಕೇಂದ್ರಸರ್ಕಾರ ವಿಶೇಷವಾದಂಥ ತೆಲಂಗಾಣ ಆಧಾರದ ಮೇಲೆ ಕೊಡಬೇಕು. ರಾಜ್ಯಸರ್ಕಾರ ಅರ್ಧಭಾಗ ಕೊಡುತ್ತದೆ ಎಂದು ಹೇಳಿದ್ದೇವೆ. ಬೋರ್ಡ್ ಮಾಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ, ತೆಲಂಗಾಣ ಆಧಾರದ ಮೇಲೆ ನಾವು ಪ್ರಯತ್ನಿಸಬೇಕು, ಅದೊಂದೇ ದಾರಿ ಎಂದು ಹೇಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡ್ ಆಗಬೇಕೆಂದು, ಅದರ ಬಗ್ಗೆ ವರದಿಯನ್ನು ಶ್ರೀ ಧರ್ಮಸಿಂಗ್ ಅವರ ಅಧ್ಯಕ್ಷತೆಯಲ್ಲಿ ನೇಮಿತವಾದ ಸಮಿತಿ ತಯಾರಿಸಿದೆ. ಮತ್ತು ಇದಕ್ಕೆ ರಸ್ತೆಗಳು, ಮೈನರ್ ಇರಿಗೇಷನ್, ಮಿಡಿಯಂ ಇರಿಗೇಷನ್, ಪೆಟಿನರ್ಸಿ ಆಸ್ಪತ್ರೆ ಬೇರೆಬೇರೆ ಸೆಕ್ಟರ್‌ಗಳು ಯಾವರೀತಿ ಹಣ ಒದಗಿಸಬೇಕು, ಇದರ ಬಗ್ಗೆ ಎಲ್ಲಾ ಡಾಕ್ಯುಮೆಂಟ್‌ಗಳು ಇವೆ, ಡೆವಲಪ್‌ಮೆಂಟ್ ಬೋರ್ಡ್ ಮಾಡಿದರೆ ಅಷ್ಟು ಸಮರ್ಪಕವಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಈಗಾಗಲೇ ವಿದರ್ಭ, ಮರಾಠವಾಡ ಮತ್ತು ತೆಲಂಗಾಣದಲ್ಲಿ ರಾಜ್ಯ ಸರ್ಕಾರವೇ ಅಸಕ್ತಿವಹಿಸಿ ಕೆಲಸ ಮಾಡಿದ್ದಾರೆ. ತಾವು ಪದೆಪದೇ ಎಲ್ಲಾ ಮಂತ್ರಿಗಳು ಕೇಂದ್ರ ಸರ್ಕಾರದ ಕಡೆಗೆ ಕೈತೋರಿಸಿದರೆ ಹೇಗೆ ? ನಾವು ಕೇಳತಕ್ಕದ್ದು ಇಷ್ಟು, ನಿಮ್ಮ ಯೋಜನೆಯಲ್ಲೇ, ಸ್ಟೇಟ್ ಪ್ಲಾನ್‌ನಲ್ಲೇ ಇದಕ್ಕೆ ಹೆಚ್ಚಿನ ಆದ್ಯತೆ ಕೊಡತಕ್ಕದ್ದು ನಿಮ್ಮ ಕೈಯಲ್ಲಿದೆ. ಇದನ್ನು ನೀವು ಸರಿಪಡಿಸಬೇಕು. ಮುಂದೆ ಕೇಂದ್ರದಿಂದ ಕೇಳಬೇಕಾದರೆ, ಎಲ್ಲರೂ ಕೂಡಿಯೇ ಕೇಳೋಣ. ಆದರೆ ಈಗ ಇರತಕ್ಕಂಥ ಹಂತದಲ್ಲಿ ಹೆಚ್ಚಿನ ಆದ್ಯತೆ ಕೊಟ್ಟು ಏನು ರಿಪೋರ್ಟ್ ಸಬ್‌ಮಿಟ್ ಮಾಡಿದ್ದಾರೆ, ಆದರ ಬೇಸಿಸ್ ಮೇಲೆ ಹೆಚ್ಚಿಗೆ ಹಣ ಏಕೆ ಕೊಡಬಾರದು ? ಮುಂಡಳಿ ಏಕೆ ಸ್ಥಾಪನೆ ಮಾಡಬಾರದು ಎನ್ನುವುದಕ್ಕೆ ಸ್ಪಷ್ಟವಾದ ಉತ್ತರ ಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇತರ ಸದಸ್ಯರು ಹೇಳಿದಂತೆ ರಾಜ್ಯ ಸರ್ಕಾರದವರು ಹೆಚ್ಚಿನ ಹಣ ಕೊಡಬೇಕು. ನಾವು ಇದರ ಬಗ್ಗೆ ಸಾಕಷ್ಟು ಆದ್ಯತೆ ಕೊಟ್ಟಿದ್ದೇವೆ. ೨೩.೨೮ಳಳಿ ಕೋಟಿ ರೂಪಾಯಿಗಳನ್ನು ಕಳೆದ ಎರಡು ವರ್ಷಗಳಲ್ಲಿ ಬಿಡುಗಡೆ ಮಾಡಿದ್ದೇವೆ. ಈ ವರ್ಷದಲ್ಲಿ ೯೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ಜಿಲ್ಲೆಗೆ ವಿಶೇಷವಾಗಿ ಎರಡು-ಮೂರು ಪಟ್ಟು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ತಮ್ಮ ವರದಿಯೂ ಇದೆ, ಹಿಂದುಳಿದ ಜಿಲ್ಲೆಯೆಂದು ಹಣ ಕೊಡಬೇಕು. ಕೊಡತಕ್ಕಂತಾದ್ದನ್ನು ಇನ್ನೂ ಸ್ವಲ್ಪ ಹೆಚ್ಚು ಮಾಡಬೇಕು. ಇದರಿಂದ ಆ ಭಾಗದ ಸಮಸ್ಯೆ ಬಗೆಹರಿಯುವುದಿಲ್ಲ. ಮಹಾರಾಷ್ಟ್ರದಲ್ಲಿ, ವಿದರ್ಭದಲ್ಲಿ ಬೋರ್ಡ್ ಮಾಡಿದ್ದಾರೆ, ಕೇಂದ್ರ ಸರ್ಕಾರದಿಂದ ಸಹಾಯ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಹೇಳಿದ್ದಾರೆ, ಅರ್ಧ ಹಣವನ್ನು ರಾಜ್ಯಸರ್ಕಾರದವರು ಕೊಡುತ್ತಿದ್ದೇವೆ, ಉಳಿದ ಅರ್ಧ ಹಣವನ್ನು ಕೇಂದ್ರ ಸರ್ಕಾರದವರು ಕೊಡಲಿ ಎಂದು. ವಿಶೇಷವಾಗಿ ಪ್ರಯತ್ನ ಮಾಡಿದರೆ ಮಾತ್ರ ಈ ಸಮಸ್ಯೆ ಬಗೆಹರಿಯಬಹುದು. ಆವು ಮತ್ತು ನಾವು ಇಬ್ಬರೂ ಈ ಬಗ್ಗೆ ಪ್ರಯತ್ನ ಮಾಡಿದರೆ ಒಳ್ಳೆಯದು. ಅಲ್ಲದೆ ಮಾನ್ಯ ಸದಸ್ಯರು ಹಂದು ಸಲಹೆ ಹೇಳಿದ್ದಾರೆ. ಆ ಭಾಗದ ಶಾಸಕರ ಸಭೆಯನ್ನು ಈ ಅಧಿವೇಶನ ಮುಗಿಯುವುದರೊಳಗಾಗಿ ಕರೆಯುತ್ತೇನೆ. ಜೊತೆಗೆ ಆ ಸಭೆಗೆ ಲೋಕಸಭಾ ಸದಸ್ಯರನ್ನೂ ಕರೆಯುತ್ತೇನೆ. ಎಲ್ಲರೂ ಒಟ್ಟಿಗೆ ಕುಳಿತರೆ ಚರ್ಚೆ ಮಾಡೋಣ.

ಅಧ್ಯಕ್ಷರು —ಮುಂದೆ, ಶ್ರೀ ಜಿ ರಾಮಂದಾಸ್, ಆಬ್ಸೆಂಟ್. ನೆಕ್ಸ್ಟ್ ಶ್ರೀ ಪ್ರತಾಪ ಚಂದ್ರಶೆಟ್ಟಿಯವರ ಪ್ರಶ್ನೆ ಮುಂದಕ್ಕೆ ಹಾಕಲಾಗಿದೆ. ಶ್ರೀ ಬಿ. ಬಸವಲಿಂಗಪ್ಪನವರು ಆಬ್ಸೆಂಟ್, ನಂತರ ಶ್ರೀ ಕೆ. ಹೆಚ್. ಶ್ರೀನಿವಾಸರವರು ತಮ್ಮ ಅಲ್ಪಕಾಲಾವಧಿ ಪ್ರಶ್ನೆ ಸಂಖ್ಯೆ ೭ (೧೩) ಜೊನೇ ಪಟ್ಟಿಯನ್ನು ಕೇಳಬೇಕು.

ಅಲ್ಪಕಾಲವಧಿ ಪ್ರಶ್ನೆ : ೭ (೧೩)

ಶ್ರೀ ಕೆ. ಹೆಚ್. ಶ್ರೀನಿವಾಸ.—ಮಾನ್ಯ ಅಧ್ಯಕ್ಷರೇ, ಇದು ೧೯೮೨ರ ಕೊನೆಯಲ್ಲಿ ಮುಕ್ತಾಯವಾಗಬೇಕಾದ ವಿಚಾರ. ನಿಮ್ಮ ಒಂದು ಸರ್ಕಾರಿ ಆಜ್ಞೆಯಲ್ಲಿ ಈ ಕೆಲಸವನ್ನು ೩-೬-೮೨ ರೊಳಗೆ ಮುಗಿಸಬೇಕೆಂದು ಆಜ್ಞೆ ಮಾಡಿದ್ದೀರಿ. ಅದೇ ಪ್ರಕಾರ ಜಿಲ್ಲಾಮಟ್ಟದಿಂದ ಈ ೩೨ ಸಾವಿರ ಪ್ರಕರಣಗಳು ಗೇಣಿದಾರರ ಪರವಾಗಿ ಸರ್ಕಾರವೇ ರಿಟ್ ಹಾಕುವುದಕ್ಕೆ ಯೋಗ್ಯವಾದ ಪ್ರಕರಣಗಳು ಎಂದು ಶಿಫಾರಸ್ ಬಂದು, ಇದರಲ್ಲಿ ತಾವೇ ತಿಳಿಸಿದಂತೆ ೩೨ ಸಾವಿರ ಪ್ರಕರಣಗಳಲ್ಲಿ ೨೫೦ ಪ್ರಕರಣಗಳಲ್ಲಿ ಮಾತ್ರ ರಿಟ್ ಹಾಕಿದ್ದೀರಿ. ಇನ್ನುಳಿದ ೩೧,೭೫೦ ಪ್ರಕರಣಗಳು ಹೀಗೆಯೇ ೧೯೮೨ರಿಂದಲೂ ಪರಿಶೀಲನೆಯಲ್ಲಿವೆ. ಸರ್ಕಾರದ ಮಟ್ಟದಲ್ಲೂ ಕೂಡ ಮತ್ತೆ ಮರು ಪರಿಶೀಲನೆ ಮಾಡುವುದಕ್ಕೆ ಅವಕಾಶ ಇದೆ. ಸಾಕಷ್ಟು ವಿವರವಾದ ಸರ್ಕಾರಿ ಆಜ್ಞೆ ಮಾಡಿದ್ದೀರಿ, ಬೇಕಾದ ಗೈಡ್‌ಲೈನ್ಸ್ ಕೊಟ್ಟಿದ್ದೀರಿ. ಶಿಫಾರಸ್ ಬಂದಿರತಕ್ಕ ೩೨ ಸಾವಿರ ಪ್ರಕರಣಗಳನ್ನು ಸರ್ಕಾರದ ಮಟ್ಟದಲ್ಲಿ ರಿವ್ಯೂ ಮಾಡುವುದಕ್ಕೆ ಒಂದು ಸೆಲ್ ಇತ್ತು. ಆ ಸೆಲ್ ಅಬಾಲಿಷ್ ಆಗಿದೆಯೆಂದು ತಿಳಿದು ಬಂದಿದೆ. ನೀವು ಈಗ ಪರಿಶೀಲನೆಯಲ್ಲಿದೆ ಎಂದು ಹೇಳುತ್ತೀರಿ, ಯಾರ ಪರಿಶೀಲನೆಯಲ್ಲಿದೆ, ಎಷ್ಟು ಕಾಲ ಪರಿಶೀಲನೆಯಲ್ಲಿರುತ್ತದೆ, ಇದರ ಬಗ್ಗೆ ಯಾವಾಗ ತೀರ್ಮಾನ ಮಾಡುತ್ತೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ, ಇದರ ಬಗ್ಗೆ ನನಗೂ ಕೂಡ ಅಸಮಾಧಾನ ಇದೆ. ಮಾನ್ಯ ಸದಸ್ಯರು ಹೇಳಿದಂತೆ ಜಿಲ್ಲಾಮಟ್ಟದಿಂದ ಪ್ರಕರಣಗಳು ಬಂದಾಗ, ೨೫೦ ಪ್ರಕರಣಗಳ ಬಗ್ಗೆ ರಿಟ್ ಹಾಕಿರುವುದು ನನಗೂ ಅಸಮಾಧಾನ. ಸಮಾಧಾನಕರವಾದ ವ್ಯವಸ್ಥೆ ಅಲ್ಲ. ನಾನು ಬಂದಮೇಲೆ ಬೇಗ ಇತ್ಯರ್ಥ ಮಾಡಬೇಕೆಂದು ಹೈಕೋರ್ಟ್‌ಗೆ ಅಪೀಲು ಹಾಕಿದರೆ, ಅವರು ಸ್ವೀಕರಿಸುತ್ತಾ ಇಲ್ಲ. ಕಾನೂನು ಪ್ರಶ್ನೆ ಬಂದಿದೆ. ಸೆಲ್ ಇಲ್ಲದಿದ್ದರೂ ಇದನ್ನು ವಿಚಾರ ಮಾಡುತ್ತೇವೆ. ಇಷ್ಟು ಕಡಿಮೆ ಸಂಖ್ಯೆಯಲ್ಲಿ ಗೇಣಿದಾರರ ಪರವಾಗಿ ರಿಟ್ ಹಾಕಿರುವುದು ಸಮಂಜಸವಲ್ಲ. ಕಾನೂನು ಪ್ರಶ್ನೆ ಇದೆ, ಆದಷ್ಟು ಜಾಗ್ರತೆ ಇವುಗಳನ್ನು ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಈ ವಿಚಾರದಲ್ಲಿ ಹೈಕೋರ್ಟಿಗೆ ಹೋಗಲಿಕ್ಕೆ, ಅಪ್‌ಲೆಟ್ ವ್ಯವಸ್ಥೆ ತಂದಿರುವುದರಿಂದಾಗಿ ತೊಂದರೆ ಬರಬಹುದು. ಅಂತಹ ಸಂದರ್ಭದಲ್ಲಿ ಇದನ್ನು ಅಪ್‌ಲೆಟ್ ಟ್ರಿಬ್ಯೂನಲ್‌ಗಾದರೂ ರೆಫರ್ ಮಾಡುವುದಕ್ಕೆ ಏನೂ ತೊಂದರೆ ಕಾಣುವುದಿಲ್ಲ. ಈ ಎರಡರೊಳಗೆ ಒಂದನ್ನು ಎಷ್ಟು ದಿವಸದ ಒಳಗೆ ತೀರ್ಮಾನ ಮಾಡುತ್ತೀರಿ. ಇದು ೧೯೮೨ ರಿಂದ ಪೆಂಡಿಂಗ್ ಇದೆ. ತಮ್ಮ ಇಲಾಖೆಯಲ್ಲಿದ್ದ ಸೆಲ್‌ನ್ನು ಕೂಡಾ ಅಬಾಲಿಷ್ ಮಾಡಲಾಗಿದೆ ಎಂದರೆ ಅದರ ಅರ್ಥ, ಇದನ್ನು ಮುಕ್ತಾಯ ಮಾಡುವ ಹಂತದಲ್ಲಿ ಕಂದಾಯ ಇಲಾಖೆ ಇದೆ ಎಂದು ಅರ್ಥವಾಗುತ್ತದೆ. ದಯವಿಟ್ಟು ಇದಕ್ಕೆ ಹೊಸದಾಗಿ ಚಾಲನೆಯನ್ನು ಕೊಡದೇ ಹೋದರೆ, ಈ ಕಾರ್ಯಕ್ರಮ ಜಾರಿಯಾಗುವುದಿಲ್ಲ. ಇದರ ಬಗ್ಗೆ ತೀವ್ರವಾಗಿ ಪರಿಶೀಲಿಸಿ ಇದಕ್ಕೆ ಕಾಲನಿಗದಿ ಮಾಡಬೇಕು. ೩೨ ಸಾವಿರ ಪ್ರಕರಣಗಳು ಬಾಕಿ ಇವೆ. ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಅಪ್‌ಲೆಟ್ ಅಥಾರಿಟಿಗೆ ನೇರವಾಗಿ ಅಪೀಲ್ ಹೋಗುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ ಎಂದು ಅಭಿಪ್ರಾಯ ಬಂದಿದೆ. ಅವಶ್ಯ ಬಿದ್ದರೆ ಕಾನೂನು ತಿದ್ದುಪಡಿಯನ್ನು ಮಾಡಬೇಕಾಗುತ್ತದೆ. ಅದನ್ನು ಆಲೋಚನೆ ಮಾಡುತ್ತೇನೆ. ಇಲಾಖೆಯಲ್ಲಿ ಸೆಲ್ ಅಬಾಲಿಷ್ ಆಗಿದ್ದರೂ ಕೂಡಾ, ಕಂದಾಯ ಇಲಾಖೆ ಅಧಿಕಾರಿಗಳು ಇದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಇದು ಕ್ಲೋಸ್ ಆಯಿತು ಎಂದು ಆಗುವುದಿಲ್ಲ. ಜಿಲ್ಲೆಯಿಂದ ಆರ್ಜಿಗಳು ಬಂದಿವೆ. ಕಾನೂನು ದೃಷ್ಟಿಯಲ್ಲಿ ಅಪೀಲ್ ಮಾಡುವುದು ಯೋಗ್ಯವೇ ಎಂದು ಪರಿಶೀಲನೆ ಮಾಡಬೇಕಾಗುತ್ತದೆ ಇದನ್ನು ಆದಷ್ಟು ಬೇಗ ಮಾಡುತ್ತೇವೆ. ಕಾಲಮಿತಿಯನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಆದಷ್ಟು ಬೇಗ ಇತ್ಯರ್ಥ ಮಾಡುತ್ತೇವೆ.

ಅಧ್ಯಕ್ಷರು.—ಈಗ ಗೈರುಹಾಜರಾಗಿದ್ದವರ ಹೆಸರನ್ನು ಮತ್ತೊಮ್ಮೆ ಕರೆಯುತ್ತೇನೆ. ಬಿ. ಬಸವಲಿಂಗಪ್ಪ – ಆಬ್ಸೆಂಟ್, ಬಿ. ಆರ್. ನೀಲಕಂಠಪ್ಪ – ಆಬ್ಸೆಂಟ್, ಕೆ.ಬಿ. ಕೋಳಿವಾಡ್– ಆಬ್ಸೆಂಟ್, ಡಿ.ಟಿ. ಜಯಕುಮಾರ್ – ಆಬ್ಸೆಂಟ್, ಜಿ. ರಾಮದಾಸ್–ಆಬ್ಸೆಂಟ್, ಬಿ. ಬಸವಲಿಂಗಪ್ಪ ಆಬ್ಸೆಂಟ್. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.